## ಕರ್ನಾಟಕ ಸರ್ಕಾರದ ನಡವಳಿ

ವಿಷಯ: ಶ್ರೀ ಸಿದ್ದಪ್ಪಾ ದುಂ.ಗಡದಾರ, ಅಧ್ಯಕ್ಷರು, ಕದಾಂಪೂರ ಗ್ರಾಮ ಪಂಚಾಯತಿ, ರಾಮದುರ್ಗ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 48(4) ಮತ್ತು 43(ಎ) ರನ್ವಯ ಕ್ರಮ ಜರುಗಿಸುವ ಬಗ್ಗೆ.

ಓದಲಾಗಿದೆ:

1) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಬೆಳಗಾವಿ ಜಿಲ್ಲಾ ಪಂಚಾಯತಿ, ಬೆಳಗಾವಿ ಇವರ ಪತ್ರ ಸಂಖ್ಯೆ: ಜಿಪಂಬೆ/ಪರಿಷತ್/ವಿವ/ಗ್ರಾಪಂಅಸರ/2017-18, ದಿನಾಂಕ 17.02.2018
2) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಬೆಳಗಾವಿ ಜಿಲ್ಲಾ ಪಂಚಾಯತಿ, ಬೆಳಗಾವಿ ಇವರ ಪತ್ರ ಸಂಖ್ಯೆ: ಜಿಪಂಬೆ/ಪರಿಷತ್/ವಿವ/14ನೇ ಹ.ಹೋ/2017-18, ದಿನಾಂಕ 26.06.2018
3) ಇದೇ ಸಮಸಂಖ್ಯೆಯ ಕಾರಣ ಕೇಳುವ ನೋಟಿಸ್, ದಿನಾಂಕ 26.02.2018
4) ಶ್ರೀ ಸಿದ್ದಪ್ಪಾ ದುಂ.ಗಡದಾರ, ಅಧ್ಯಕ್ಷರು, ಕದಾಂಪೂರ ಗ್ರಾಮ ಪಂಚಾಯತಿ, ರಾಮದುರ್ಗ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರು ಕಾರಣ ಕೇಳಿ ನೋಟೀಸಿಗೆ ಸಲ್ಲಿಸಿರುವ ಲಿಖಿತ ಹೇಳಿಕೆ, ದಿನಾಂಕ 12.03.2018
5) ಕರ್ನಾಟಕ ಓಂಬುಡ್ಸ್‌ಮನ್ ಮೇಲ್ಮನವಿ ಪ್ರಾಧಿಕಾರ, ಮ.ಗಾಂ.ರಾ.ಗ್ರಾ.ಉ.ಖಾ.ಯೋಜನೆ ಪ್ರಕರಣ ಸಂಖ್ಯೆ: ಒ.ಮೇ.ಪ್ರಾ.ಪ್ರ./75/2017-18, ದಿನಾಂಕ 13.08.2018
6) ಇದೇ ಸಮಸಂಖ್ಯೆಯ ವಿಚಾರಣೆಗೆ ಹಾಜರಾಗಲು ತಿಳುವಳಿಕೆ ಪತ್ರ, ದಿನಾಂಕ 04.09.2018

ಪ್ರಸ್ತಾವನೆ:

ಮೇಲೆ ಓದಲಾದ (1) ರಲ್ಲಿ, ಶ್ರೀ ಬಸವರಾಜ ರಾಮಪ್ಪ ಚಿಕ್ಕೂರ, ಸಾಲಹಳ್ಳಿ ಗ್ರಾಮ ಇವರು ಸಲ್ಲಿಸಿದ ದೂರಿಗೆ ಸಂಬಂಧಿಸಿದಂತೆ ಸಹಾಯಕ ನಿರ್ದೇಶಕರು, ಪಶು ಸಂಗೋಪನಾ ಇಲಾಖೆ, ರಾಮದುರ್ಗ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಪಂ.ರಾ.ಇಂ.ಉ.ವಿಭಾಗ, ರಾಮದುರ್ಗ ಮತ್ತು ರಾಜ್ಯ/ಜಿಲ್ಲಾ ಗುಣ ನಿಯಂತ್ರಣ ಮಾನಿಟರ ಇವರಿಂದ ತಪಾಸಣೆ ನಡೆಸಿದ್ದು, ಬೆಳಗಾವಿ ಜಿಲ್ಲಾ ಪಂಚಾಯತಿಯ ಓಂಬುಡ್ಸ್‌ಮನ್ ರವರು ಕದಾಂಪೂರ ಗ್ರಾಮ ಪಂಚಾಯತಿಯಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಒಟ್ಟಾರೆಯಾಗಿ ರೂ.1,17,836/-ಗಳ ಅವ್ಯವಹಾರವಾಗಿರುವುದು ಕಂಡುಬಂದಿದ್ದು, ಶ್ರೀ ಸಿದ್ದಪ್ಪಾ ದುಂ.ಗಡದಾರ, ಅಧ್ಯಕ್ಷರು, ಕದಾಂಪೂರ ಗ್ರಾಮ ಪಂಚಾಯತಿ, ರಾಮದುರ್ಗ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರ ಮೇಲಿನ ಆರೋಪ ಗಂಭೀರ ಸ್ವರೂಪದ್ದಾಗಿರುವುದರಿಂದ ಅವರಿಂದ ದುರುಪಯೋಗವಾದ ಮೊತ್ತ ವಸೂಲಾತಿ ಮಾಡುವುದಲ್ಲದೆ ಅವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 48(4) ಮತ್ತು 43(ಎ) ರಡಿ ಕ್ರಮ ಕೈಗೊಳ್ಳಲು ಆದೇಶಿಸಿರುತ್ತಾರೆ. ಈ ಆರೋಪಗಳಡಿ ಹಾಗೂ ದಾಖಲೆಗಳನ್ನು ಸರಿಯಾಗಿ ನಿರ್ವಹಿಸದೆ ಹಾಗೂ ನಿಯಮಗಳನ್ನು ಪಾಲಿಸದೆ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ರೂ.30.78ಲಕ್ಷ ಹಾಗೂ ನಿಧಿ-1, 2 ಮತ್ತು 14ನೇ ಹಣಕಾಸು ಯೋಜನೆಯಡಿ ರೂ.39.00ಲಕ್ಷಗಳ ಖರ್ಚು ಭರಿಸಿ ಅವ್ಯವಹಾರ ಎಸಗಿರುವ ಹಿನ್ನೆಲೆಯಲ್ಲಿ ಅವರ ವಿರುದ್ಧ ಅಧಿನಿಯಮದ ಪ್ರಕರಣ 43ಎ ರನ್ವಯ ಕ್ರಮ ಜರುಗಿಸಿ ಸದಸ್ಯತ್ವ ರದ್ದುಪಡಿಸಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಬೆಳಗಾವಿ ಜಿಲ್ಲಾ ಪಂಚಾಯತಿ ರವರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮೇಲೆ ಓದಲಾದ (2) ರಲ್ಲಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 48(4) ಮತ್ತು 43(ಎ) ರನ್ವಯ ಕ್ರಮ ಜರುಗಿಸಿ, ಗ್ರಾಮ ಪಂಚಾಯತಿ ಅಧ್ಯಕ್ಷ ಮತ್ತು ಸದಸ್ಯ ಸ್ಥಾನದಿಂದ ಏಕೆ ತೆಗೆದು ಹಾಕಬಾರದು ಎಂಬುದರ ಬಗ್ಗೆ ವಿವರಣೆ ನೀಡುವಂತೆ ಸದರಿ ಆಪಾದಿತ ಅಧ್ಯಕ್ಷರಿಗೆ ಕಾರಣ ಕೇಳುವ ನೋಟೀಸನ್ನು ಜಾರಿಗೊಳಿಸಲಾಗಿತ್ತು.

ಮೇಲೆ ಓದಲಾದ (3) ರಲ್ಲಿ ಸದರಿ ಗ್ರಾಮ ಪಂಚಾಯತಿ ಅಧ್ಯಕ್ಷರು ಸರ್ಕಾರದಿಂದ ಜಾರಿಗೊಳಿಸಲಾಗಿದ್ದ ಕಾರಣ ಕೇಳಿ ನೋಟಿಸಿಗೆ ಕೆಳಗಿನಂತೆ ಉತ್ತರವನ್ನು ಸಲ್ಲಿಸಿರುತ್ತಾರೆ.

1) ದಿನಾಂಕ 06.01.2017 ರ ದೂರಿನ ಆಧಾರದ ಮೇಲೆ ದಿನಾಂಕ 31.01.2018 ರಂದು ಓಂಬುಡ್ಸ್‌ಮನ್‌ರವರು ನಿಯಮಾನುಸಾರ 30 ದಿನಗಳೊಳಗೆ ದೂರನ್ನು ಇತ್ಯರ್ಥಪಡಿಸದೆ ವಿಳಂಬವಾಗಿ ದುರುದ್ದೇಶಪೂರ್ವಕ ಆದೇಶ ಮಾಡಿರುತ್ತಾರೆ.
2) ವಿಚಾರಣೆಯಲ್ಲಿ ದೂರುದಾರರು ಗೈರುಹಾಜರಾಗಿದ್ದು ಯಾವುದೇ ಸಾಕ್ಷ್ಯಗಳನ್ನು ಒದಗಿಸಿರುವುದಿಲ್ಲ.
3) 8 ಕಾಮಗಾರಿಗಳ ತನಿಖೆಯನ್ನು ಪಶುಸಂಗೋಪನಾ ಇಲಾಖೆಯ ಸಹಾಯಕ ನಿರ್ದೇಶಕರಿಂದ ಮಾಡಿಸಿದ್ದು, ಸರಿಯಾದ ತಾಂತ್ರಿಕ ವರದಿ ನೀಡದೆ ಕೆಲವು ಆಡಳಿತಾತ್ಮಕ ನ್ಯೂನ್ಯತೆಗಳನ್ನು ತೋರಿಸಿ ವರದಿ ನೀಡಿದ್ದಾರೆ. ನಮೂನೆಗಳಲ್ಲಿ ಕೂಲಿಕಾರರ ಸಹಿ ಇಲ್ಲದಿರುವುದು, ಅಂದಾಜು ಪತ್ರಿಕೆ ಇಲ್ಲದಿರುವುದು, ಎಂಬಿ ಪುಸ್ತಕ ಹಾಜರುಪಡಿಸದಿರುವುದು, ಎನ್‌ಎಂಆರ್ ಗೆ ಅಧ್ಯಕ್ಷರ ಸಹಿ ಇಲ್ಲದಿರುವುದು, ಫೋಟೋಗಳನ್ನು ನಿರ್ವಹಿಸುವುದು ಪಂಚಾಯತಿ ಅಭಿವೃದ್ಧಿ ಅಧಿಕಾರಿ ಕರ್ತವ್ಯವಾಗಿರುತ್ತದೆ. ಈ ವಿಷಯಕ್ಕೆ ನನ್ನನ್ನು ಹೊಣೆ ಮಾಡುವುದು ಸರಿಯಲ್ಲ.
4) ಪುನಃ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರಿಂದ ದಿನಾಂಕ 01.09.2017 ರಲ್ಲಿ ವರದಿ ಪಡೆದಿದ್ದು, ನಮೂದಿಸಿರುವ ನ್ಯೂನ್ಯತೆಗಳು ಬಹುಪಾಲು ಇಂಜಿನಿಯರ್ ಹಾಗೂ ಪಂ.ಅ.ಅ. ಯದ್ದಾಗಿರುತ್ತದೆ.
5) ಪುನಃ 3ನೇ ಬಾರಿಗೆ SQM/DQM ಗಳಿಂದ ವರದಿ ಪಡೆದಿದ್ದು, ನಮೂದಿಸಿರುವ ನ್ಯೂನ್ಯತೆಗಳು ಬಹುಪಾಲು ಇಂಜಿನಿಯರ್ ಹಾಗೂ ಪಂ.ಅ.ಅ. ಕಾರಣರಾಗಿರುತ್ತಾರೆ. ಹಣ ಪಾವತಿಗೆ ಪಂ.ಅ.ಅ. ನಿಯಮಗಳನ್ನು ಪಾಲಿಸಿದ ನಂತರ ಅಧ್ಯಕ್ಷರ ಸಹಿಗೆ ಮಂಡಿಸುವುದು ಅವರ ಕರ್ತವ್ಯವಾಗಿರುತ್ತದೆ. ಒಟ್ಟಾರೆ ಗುಣನಿಯಂತ್ರಕರ ವರದಿಯಂತೆ ರೂ.1,17,836/-ಗಳು ಹೆಚ್ಚುವರಿಯಾಗಿ ಹಣ ಪಾವತಿಸಲು ಕಾರಣವಾಗಿದೆ ಎಂಬು ಓಂಬುಡ್ಸ್‌ಮನ್‌ರವರು ತೀರ್ಮಾನಿಸಿದ್ದು ಹಣವನ್ನು ಇಂಜಿನಿಯರ್‌ರವರು ಬರೆದ ಅಳತೆ ಪ್ರಕಾರ ಮತ್ತು ಪಂ.ಅ.ಅ. ಶಿಫಾರಸ್ಸಿನ ಪ್ರಕಾರ ಪಾವತಿ ಮಾಡಿರುತ್ತೇನೆ.
6) ನಾನು ತಾಂತ್ರಿಕ ಪರಿಣಿತನಲ್ಲ, ಮೇಲೋಟಕ್ಕೆ ಕಾಮಗಾರಿಗಳು ಆಗಿರುವುದನ್ನು ಪರಿಗಣಿಸಿ ಡಾಂಗಲ್ ಹಾಕಿರುತ್ತೇನೆ. ಒಟ್ಟಿನಲ್ಲಿ ಸರ್ಕಾರದಿಂದ ವೇತನ ಪಡೆಯುವ ನೌಕರರು ಮಾಡಿದ ತಪ್ಪಿಗೆ ನನ್ನು ಹೊಣೆಗಾರ ಮಾಡಿರುವುದು ತುಬಾ ಅನ್ಯಾಯವಾಗಿರುತ್ತದೆ. ಓಂಬುಡ್ಸಮನ್‌ರವರು ಅನೇಕ ಹಂತದಲ್ಲಿ ಪರಿಶೀಲನೆ ಮಾಡಿ ವರದಿ ಪಡೆದಿರುವುದು ನ್ಯಾಯಸಮ್ಮತವಲ್ಲ. ಓಂಬುಡ್ಸ್‌ಮನ್‌ರವರು ಸದರಿ ತನಿಖಾ ವರದಿಗಳ ಬಗ್ಗೆ ನನ್ನ ಅಭಿಪ್ರಾಯ ಪಡೆಯದೆ, ಸ್ಥಳಪರಿಶೀಲನೆ ಮಾಡದೆ, ವರದಿಗಳ ಆಧಾರದ ಮೇಲೆ ಆದೇಶ ಮಾಡಿರುವುದು ಕಾನೂನಿಗೆ ವಿರುದ್ಧವಾಗಿರುತ್ತದೆ. ಈ ಆದೇಶದ ವಿರುದ್ಧ ಆಯುಕ್ತರು, ಎನ್‌ಆರ್‌ಇಜಿಎ ಇವರಿಗೆ ದಿನಾಂಕ 06.03.2018 ರಂದು ಮೇಲ್ಮನವಿ ಸಲ್ಲಿಸಿರುತ್ತೇನೆ, ಸದರಿ ಮೇಲ್ಮನವಿ ತೀರ್ಮಾನದ ನಂತರ ಮುಂದಿನ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.
7) ಇದೇ ರೀತಿ ಬೆಳಗಾವಿಯಲ್ಲಿ ಅನೇಕ ಪ್ರಕರಣಗಳಿದ್ದರೂ ನನ್ನ ಮೇಲೆ ಮಾತ್ರ ಪ್ರಸ್ತಾವನೆ ಕಳುಹಿಸಿರುವುದು ರಾಜಕೀಯ ಪ್ರೇರಿತವಾಗಿದೆ ಎಂದು ತಿಳಿಸಿರುತ್ತಾರೆ.

ಮೇಲೆ ಓದಲಾದ (4) ರನ್ವಯ ದಿನಾಂಕ 19.09.2018ರಂದು ಸರ್ಕಾರದ ಕಾರ್ಯದರ್ಶಿ(ಪಂ.ರಾಜ್) ರವರ ನ್ಯಾಯಾಲಯದಲ್ಲಿ ಪ್ರಕರಣದ ವಿಚಾರಣೆ ಜರುಗಿಸಲಾಗಿದೆ. ಆಪಾದಿತ ಕದಾಂಪುರ ಗ್ರಾಮ ಪಂಚಾಯತಿ ಅಧ್ಯಕ್ಷರು, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ತಾಲ್ಲೂಕು ಪಂಚಾಯತಿ ವ್ಯವಸ್ಥಾಪಕರು ಹಾಗೂ ಜಿಲ್ಲಾ ಪಂಚಾಯತಿ ಸಹಾಯಕ ಕಾರ್ಯದರ್ಶಿ ಹಾಜರಿರುತ್ತಾರೆ. ಎಲ್ಲರ ಅಹವಾಲನ್ನು ಕೇಳಲಾಗಿ, ಆಪಾದಿತ ಅಧ್ಯಕ್ಷರು ಈಗಾಗಲೇ ಲಿಖಿತ ಹೇಳಿಕೆಯನ್ನು ಓಂಬುಡ್ಸ್‌ಮನ್‌ರವರ ಆದೇಶದ ವಿರುದ್ಧ ಓಂಬುಡ್ಸ್‌ಮನ್‌ರವರ ಮೇಲ್ಮನವಿ ಪ್ರಾಧಿಕಾರ, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ ಇಲ್ಲಿಗೆ ಮೇಲ್ಮನವಿ ಸಲ್ಲಿಸಿದ್ದು, ವಿಚಾರಣಾ ನಂತರ ಶ್ರೀ ಸಿದ್ದಪ್ಪಾ ದುಂ.ಗಡದಾರ, ಅಧ್ಯಕ್ಷರು ಹಾಗೂ ಇತರೆ ಅಧಿಕಾರಿಗಳಿಗೆ ತಲಾ ರೂ.58,958/-ಗಳ ವಸೂಲಿಗೆ ಓಂಬುಡ್ಸ್‌ಮನ್‌ರವರ ಮೇಲ್ಮನವಿ ಪ್ರಾಧಿಕಾರವು ಆದೇಶಿಸಿರುತ್ತದೆ ಹಾಗೂ ಸದರಿ ಅಧ್ಯಕ್ಷರ ವಿರುದ್ಧ ಪ್ರಕರಣ 43ಎ & 48(4)ರನ್ವಯ ವಿಚಾರಣೆ ಜರುಗಿಸಬಹುದಾಗಿದೆ ಎಂದು ಆದೇಶಿಸಿರುತ್ತಾರೆ.

ಲಭ್ಯವಿರುವ ಎಲ್ಲಾ ದಾಖಲಾತಿಗಳು, ಆಪಾದಿತರ ಲಿಖಿತ ಹಾಗೂ ಮೌಖಿಕ ಹೇಳಿಕೆಗಳನ್ನು ಪರಿಶೀಲಿಸಲಾಗಿ, ಆಪಾದಿತ ಕದಾಂಪುರ ಗ್ರಾಮ ಪಂಚಾಯತಿ ಅಧ್ಯಕ್ಷರಾದ ಶ್ರೀ ಸಿದ್ದಪ್ಪ ದುಂ.ಗಡದಾರ ಇವರು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ನಿರ್ವಹಿಸಲಾದ ಕಾಮಗಾರಿಗಳಿಗೆ ಅಗತ್ಯಕ್ಕಿಂತ ಹೆಚ್ಚುವರಿಯಾಗಿ ಹಣ ಪಾವತಿಸಿ, ಸರ್ಕಾರದ ಹಣ ದುರುಪಯೋಗಪಡಿಸಿಕೊಂಡಿರುವುದು ಓಂಬುಡ್ಸ್‌ಮನ್‌ರವರ ಮೇಲ್ಮನವಿ ಪ್ರಾಧಿಕಾರ, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ ಹಾಗೂ ಬೆಳಗಾವಿ ಜಿಲ್ಲಾ ಪಂಚಾಯತಿಯ ಓಂಬುಡ್ಸ್‌ಮನ್‌ರವರ ಆದೇಶಗಳಿಂದ ಸ್ಪಷ್ಟವಾಗುತ್ತದೆ. ಹಾಗೂ ಬೆಳಗಾವಿ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ವರದಿಯನ್ವಯ ವಿವಿಧ ಯೋಜನೆಗಳಡಿ ನಿಯಮ ಪಾಲಿಸದೆ ಹಣ ಖರ್ಚು ಮಾಡಿರುವುದು ಕಂಡುಬರುತ್ತದೆ. ಅಲ್ಲದೆ, ಹೊಸದಾಗಿ ಗ್ರಾಮ ಪಂಚಾಯತಿ ಸದಸ್ಯರಾಗಿ ಹಾಗೂ ಅಧ್ಯಕ್ಷರಾಗಿ ಚುನಾಯಿತಗೊಂಡ ಸಂದರ್ಭದಲ್ಲಿ ಅಬ್ದುಲ್ ನಜೀರ್ ಸಾಬ್ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ತರಬೇತಿ ಸಂಸ್ಥೆ ವತಿಯಿಂದ ಗ್ರಾಮ ಪಂಚಾಯತಿ ಆಡಳಿತ ಹಾಗೂ ಯೋಜನಗಳ ಬಗ್ಗೆ ತರಬೇತಿಯನ್ನು ಸಹ ನೀಡಲಾಗಿದೆ. ಆದಾಗ್ಯೂ, ಸರ್ಕಾರದ ಹಣ ದುರುಪಯೋಗಪಡಿಸಿಕೊಂಡಿರುವ ಹಿನ್ನೆಲೆಯಲ್ಲಿ ಶ್ರೀ ಸಿದ್ದಪ್ಪಾ ದುಂ.ಗಡದಾರ, ಅಧ್ಯಕ್ಷರು, ಕದಾಂಪೂರ ಗ್ರಾಮ ಪಂಚಾಯತಿ, ರಾಮದುರ್ಗ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 43ಎ ರನ್ವಯ ಕದಾಂಪೂರ ಗ್ರಾಮ ಪಂಚಾಯತಿಯ ಅಧ್ಯಕ್ಷ ಮತ್ತು ಸದಸ್ಯತ್ವ ಸ್ಥಾನದಿಂದ ತೆಗೆದುಹಾಕಲು ನಿರ್ಣಯಿಸಿದೆ. ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 198 ಗ್ರಾಪಂಅ 2018 ಬೆಂಗಳೂರು, ದಿನಾಂಕ: 29.10.2018**

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ಸಿದ್ದಪ್ಪಾ ದುಂ.ಗಡದಾರ, ಅಧ್ಯಕ್ಷರು, ಕದಾಂಪೂರ ಗ್ರಾಮ ಪಂಚಾಯತಿ, ರಾಮದುರ್ಗ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರು ಕದಾಂಪೂರ ಗ್ರಾಮ ಪಂಚಾಯತಿಯ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ನಿರ್ವಹಿಸಲಾದ ಕಾಮಗಾರಿಗಳಿಗೆ ಅಗತ್ಯಕ್ಕಿಂತ ಹೆಚ್ಚುವರಿಯಾಗಿ ಹಣ ಪಾವತಿಸಿ, ಸರ್ಕಾರದ ಹಣ ದುರುಪಯೋಗಪಡಿಸಿಕೊಂಡಿರುವುದು ಹಾಗೂ ಬೆಳಗಾವಿ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ವರದಿಯನ್ವಯ ವಿವಿಧ ಯೋಜನೆಗಳಡಿ ನಿಯಮ ಪಾಲಿಸದೆ ಹಣ ಖರ್ಚು ಮಾಡಿರುವುದು ಕಂಡುಬಂದಿರುವ ಹಿನ್ನೆಲೆಯಲ್ಲಿ, ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 43ಎ & 48(4) ರನ್ವಯ ಕ್ರಮ ಜರುಗಿಸಿ, ಶ್ರೀ ಸಿದ್ದಪ್ಪಾ ದುಂ.ಗಡದಾರ, ಅಧ್ಯಕ್ಷರು, ಕದಾಂಪೂರ ಗ್ರಾಮ ಪಂಚಾಯತಿ, ರಾಮದುರ್ಗ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರನ್ನು ಬೆಳಗಾವಿ ಜಿಲ್ಲೆ ರಾಮದುರ್ಗ ತಾಲ್ಲೂಕು ಕದಾಂಪೂರ ಗ್ರಾಮ ಪಂಚಾಯತಿಯ ಅಧ್ಯಕ್ಷ ಸ್ಥಾನದಿಂದ ವಜಾಗೊಳಿಸಿ, ಅವರ ಸದಸ್ಯತ್ವನ್ನು ರದ್ದುಪಡಿಸಿ ಆದೇಶಿಸಿದೆ.

ಹಾಗೂ ಕರ್ನಾಟಕ ಓಂಬುಡ್ಸ್‌ಮನ್ ಮೇಲ್ಮನವಿ ಪ್ರಾಧಿಕಾರ, ಮ.ಗಾಂ.ರಾ.ಗ್ರಾ.ಉ.ಖಾ.ಯೋಜನೆ, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯದ ಪ್ರಕರಣ ಸಂಖ್ಯೆ: ಓ.ಮೇ.ಪ್ರಾ.ಪ್ರ./75/2017-18, ದಿನಾಂಕ 13.08.2018ರ ಆದೇಶದನ್ವಯ ಶ್ರೀ ಸಿದ್ದಪ್ಪಾ ದುಂ.ಗಡದಾರ, ಅಧ್ಯಕ್ಷರು, ಕದಾಂಪೂರ ಗ್ರಾಮ ಪಂಚಾಯತಿ, ರಾಮದುರ್ಗ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 246(8) ಮತ್ತು 157(2)ರನ್ವಯ ಕ್ರಮ ಜರುಗಿಸಿ, ದುರುಪಯೋಗವಾದ ಹಣವನ್ನು ವಸೂಲಾತಿ ಮಾಡಲು ಆದೇಶಿಸಿದೆ ಹಾಗೂ ಪ್ರಕರಣದಲ್ಲಿ ಭಾಗಿಯಾದ ಅಧಿಕಾರಿ/ನೌಕರರುಗಳಿಂದ ನಿಯಮಾನುಸಾರ ದುರುಪಯೋಗವಾದ ಹಣವನ್ನು ವಸೂಲಾತಿ ಮಾಡಲು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

29/x/18

(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಪ್ರತಿ:

1) ಜಿಲ್ಲಾಧಿಕಾರಿಗಳು, ಬೆಳಗಾವಿ ಜಿಲ್ಲೆ.
2) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಬೆಳಗಾವಿ ಜಿಲ್ಲಾ ಪಂಚಾಯತಿ, ಬೆಳಗಾವಿ.

3) ಕಾರ್ಯದರ್ಶಿ, ಕರ್ನಾಟಕ ರಾಜ್ಯ ಚುನಾವಣಾ ಆಯೋಗ, ಕನ್ನಿಂಗ್‌ಹ್ಯಾಂ ರಸ್ತೆ, ಬೆಂಗಳೂರು.
4) ಕರ್ನಾಟಕ ಓಂಬುಡ್ಸ್‌ಮನ್ ಮೇಲ್ಮನವಿ ಪ್ರಾಧಿಕಾರ, ಮ.ಗಾಂ.ರಾ.ಗ್ರಾ.ಉ.ಖಾ.ಯೋಜನೆ, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಬಹುಮಹಡಿ ಕಟ್ಟಡ, ಬೆಂಗಳೂರು.
5) ಸರ್ಕಾರದ ಉಪಕಾರ್ಯದರ್ಶಿ(ಆಡಳಿತ), ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ.
6) ಕಾರ್ಯನಿರ್ವಾಹಕ ಅಧಿಕಾರಿ, ಹುಕ್ಕೇರಿ ತಾಲ್ಲೂಕು ಪಂಚಾಯತಿ, ಹುಕ್ಕೇರಿ, ಬೆಳಗಾವಿ ಜಿಲ್ಲೆ.
(ಸದರಿಯವರಿಗೆ ಆದೇಶದ ಪ್ರತಿಯನ್ನು ತಲುಪಿಸಿ, ಸ್ವೀಕೃತಿಯನ್ನು ಸರ್ಕಾರಕ್ಕೆ ಕಳುಹಿಸಲು ತಿಳಿಸಿದೆ)
7) ಶ್ರೀ ಸಿದ್ದಪ್ಪಾ ದುಂ.ಗಡದಾರ, ಅಧ್ಯಕ್ಷರು, ಕದಾಂಪೂರ ಗ್ರಾಮ ಪಂಚಾಯತಿ,ರಾಮದುರ್ಗ ತಾ., ಬೆಳಗಾವಿ ಜಿಲ್ಲೆ
8) ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಕದಾಂಪೂರ ಗ್ರಾಮ ಪಂಚಾಯತಿ, ರಾಮದುರ್ಗ ತಾ., ಬೆಳಗಾವಿ ಜಿಲ್ಲೆ.
9) ಗಣಕ ಕೋಶ – ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
10) ಹೆಚ್ಚುವರಿ ಪ್ರತಿ.
11)

<u>ಪ್ರತಿಯನ್ನು ಮಾಹಿತಿಗಾಗಿ:</u>

1) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ.
2) ಸರ್ಕಾರದ ಕಾರ್ಯದರ್ಶಿಗಳು(ಪಂ.ರಾಜ್), ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ.